ಕರ್ನಾಟಕ ಸರ್ಕಾರ

ಸಂ.ಯೋಇ 76 ಯೋವಿವಿ 2017.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:13-07-2017.

**ಅಧಿಕೃತ ಜ್ಞಾಪನ**

ವಿಷಯ:- ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿಗಳಿಗೆ ಸೇರ್ಪಡೆ ಮಾಡುವ ಬಗ್ಗೆ

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಪರಿಷ್ಕೃತ ಮಾರ್ಗಸೂಚಿಗಳು, 2014ರಡಿ ಈ ಕೆಳಕಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅವಕಾಶಗಳನ್ನು ಕಲ್ಪಿಸಿ ಮಾರ್ಗಸೂಚಿಗಳ ಅನುಬಂಧ-III ರಲ್ಲಿ ಸೇರ್ಪಡೆ ಮಾಡಲಾಗಿದೆ.

1) ವಾರ್ಷಿಕ ರೂ.20.00 ಲಕ್ಷಗಳಿಗೆ ಮೀರದಂತೆ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಿಂದ ಶಾಲಾ ಮಕ್ಕಳಿಗೆ ಸ್ಕೂಲ್ ಬ್ಯಾಗ್, ಕಂಪ್ಯೂಟರ್ (ಗಣಕ ಯಂತ್ರ), ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಹಾಗೂ ಮಹಿಳಾ ಸಂಘಗಳಿಗೆ ಹೊಲಿಗೆ ಯಂತ್ರಗಳನ್ನು ನೀಡಲು ಕೆಟಿಪಿಪಿ ಕಾಯ್ದೆ, 1999 ಮತ್ತು ನಿಯಮಗಳು,2000ರ ಅನುಸಾರ ನಿಯಮಗಳನ್ನು ಪಾಲಿಸಿ ಅನುಮತಿ ನೀಡುವುದು. ಆದರೆ, ಯಾವುದೇ ಇಲಾಖೆಯಲ್ಲಿ ಮೇಲ್ಕಂಡ ಸವಲತ್ತುಗಳನ್ನು ಪಡೆದ ಫಲಾನುಭವಿಗಳಿಗೆ ಪುನ: ನೀಡತಕ್ಕದ್ದಲ್ಲ.
2) ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕೆರೆ, ಕೆರೆಕೋಡಿ, ಕೆರೆಕಟ್ಟೆ ಹಾಗೂ ರಾಜಕಾಲುವೆ ಅಭಿವೃದ್ಧಿ/ದುರಸ್ತಿಪಡಿಸಲು ವಾರ್ಷಿಕ ರೂ.20.00 ಲಕ್ಷಗಳಿಗೆ ಮೀರದಂತೆ ಅನುಮತಿ ನೀಡುವುದು. ಮೇಲ್ಕಂಡ ಕಾಮಗಾರಿಗಳನ್ನು ಕೈಗೊಂಡಾಗ ಕೆರೆಹೂಳು ಎತ್ತುವುದಕ್ಕೆ ಮಾಡುವ ವೆಚ್ಚವು ಅಂದಾಜು ವೆಚ್ಚದ ಶೇಕಡ 30ಕ್ಕಿಂತ ಮೀರತಕ್ಕದ್ದಲ್ಲ. ಕೆರೆ ಸಂಜೀವಿನಿ, ಎಮ್‌ಎನ್‌ಆರ್‌ಇಜಿ ಹಾಗೂ ಇತರ ಸರ್ಕಾರಿ ಯೋಜನೆಗಳ ಮೂಲಕ ಕಳೆದ ಮೂರು ವರ್ಷಗಳಲ್ಲಿ ಈ ಕಾಮಗಾರಿಗಳನ್ನು ಕೈಗೊಂಡಿರತಕ್ಕದ್ದಲ್ಲ.
3) ಬೇಸಿಗೆ ಕಾಲದಲ್ಲಿ ಹಾಗೂ ಬರಗಾಲ ಪೀಡಿತ ಪ್ರದೇಶದಲ್ಲಿ ಬರಿದಾದ ಕೊಳವೆ ಬಾವಿಗಳ ಪುನಶ್ಚೇತನ/ರೀಚಾರ್ಜ್/ಫ್ಲಷಿಂಗ್ ಮಾಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನಿಗದಿಪಡಿಸಿದ ನಿಯಮಗಳು/ಮಾರ್ಗಸೂಚಿಗಳು ಮತ್ತು ದರದನ್ವಯ ವಾರ್ಷಿಕ ರೂ.20.00 ಲಕ್ಷಗಳಿಗೆ ಮೀರದಂತೆ ವೆಚ್ಚವನ್ನು ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ

ಇವರಿಗೆ,

1) ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ/ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2) ಎಲ್ಲಾ ಜಿಲ್ಲಾಧಿಕಾರಿಗಳು.
3) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
4) ವಿಧಾನ ಸಭೆ/ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳು.
5) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದಶಿಯವರ ಆಪ್ತ ಕಾರ್ಯದರ್ಶಿ.
6) ಮಾನ್ಯ ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಆಪ್ತ ಕಾರ್ಯದರ್ಶಿ.
7) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
8) ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ.
9) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನಾ ಇಲಾಖೆ.
10) ನಿರ್ದೇಶಕರು, ಪಿಪಿ ವಿಭಾಗ, ಯೋಜನಾ ಇಲಾಖೆ.
11) ಶಾಖಾಧಿಕಾರಿ, ಸ್ವೀಮರ ಶಾಖೆ, ಯೋಜನಾ ಇಲಾಖೆ (ಕಂಪೆಂಡಿಯಮ್‌ನಲ್ಲಿ ಪ್ರಕಟಿಸಲು)
12) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.